# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ದೊಡ್ಡಬಳ್ಳಾಪುರ

**ಸಿ ಸಿ ನಂ : 523/2015**

**ಪಿ ಡಬ್ಲೂ - 5**

**ಸಿ ಡಬ್ಲೂ - 2**

**ದಿಃ 17.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಹನುಮಂತರಾಯಪ್ಪ**
**ತಂದೆಯ ಹೆಸರು ಃ ದೊಡ್ಡಅಜ್ಜಪ್ಪ**
**ವಯಸ್ಸು ಃ 66 ವರ್ಷ**
**ಉದ್ಯೋಗ ಃ ವ್ಯವಸಾಯ**
**ವಿಳಾಸ ಃ ಚಿಕ್ಕನಹಳ್ಳಿ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ಆರೋಪಿತರು ಗೊತ್ತು. ಚಾಸಾ-1 ರವರು ನನ್ನ ಹೆಂಡತಿ. ಅವರು ಮರಣ ಹೊಂದಿರುತ್ತಾರೆ. ಸುಮಾರು 8-9 ವರ್ಷಗಳ ಹಿಂದೆ ಬೆಳಿಗ್ಗೆ 9-00 ರಿಂದ 10-00 ಗಂಟೆ ಸಮಯದಲ್ಲಿ ಹೆಂಗಸರ ಮಾತಿಗೆ ಚಾಸಾ-1 ಮತ್ತು ಆರೋಪಿತರ ನಡುವೆ ಗಲಾಟೆಯಾಗಿತ್ತು. 1 ನೇ ಆರೋಪಿಯು ಚಾಸಾ-1 ರವರಿಗೆ ಅವಾಚ್ಯಶಬ್ಧಗಳಿಂದ ಬೈದು ದೂಡಿದ್ದಳು. ಅದರಿಂದ ಚಾಸಾ-1 ರವರ ಕೈ ಮುರಿದಿತ್ತು. ಜಗಳವನ್ನು ನಾನೇ ಬಿಡಿಸಿರುತ್ತೇನೆ. ನಂತರ ಚಾಸಾ-1 ರವರನ್ನು ದೊಡ್ಡಬಳ್ಳಾಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ಆ ನಂತರ ಬೆಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

**(ಈ ಹಂತದಲ್ಲಿ ಸ ಸ ಅ ರವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸ ಸ ಅ ರವರಿಂದ**

ದಿಃ 01.02.2015 ರಂದು ರಾತ್ರಿ 7-00 ಗಂಟೆಯ ಸಮಯದಲ್ಲಿ ನಾನು ನಮ್ಮ ಮನೆಯ ಬಳಿ ಇದ್ದಾಗ ಚಾಸಾ-1 ರವರು ನಮ್ಮ ಮನೆಯ ಹತ್ತಿರ ಇದ್ದ ಸೌದೆ ಮತ್ತು ಮಚ್ಚನ್ನು ಯಾರೋ ಎತ್ತುಕೊಂಡು ಹೋಗಿದ್ದಾರೆ ಎಂದು 2 ನೇ ಆರೋಪಿಗೆ ಕೇಳಿದ್ದಾಳೆ ಎಂದರೆ ಸರಿ.

ನಂತರ 2 ನೇ ಆರೋಪಿಯು ನೀನು ಯಾವಳೇ ಕೇಳಲು ಎಂದು ಅವಾಚ್ಯಶಬ್ಧಗಳಿಂದ ಬೈದು ಗಲಾಟೆ ಮಾಡುತ್ತಿದ್ದಳು ಎಂದರೆ ಸರಿ. ಅಷ್ಟರಲ್ಲಿ 1 ನೇ ಆರೋಪಿ ಅಲ್ಲಿಗೆ ಬಂದು ನನ್ನ ಅಮ್ಮನನ್ನು ಏನು ಕೇಳುವುದು ಎಂದು ಅವಾಚ್ಯಶಬ್ಧಗಳಿಂದ ಬೈದು ಅಲ್ಲಿಯೇ ಬಿದ್ದಿದ್ದ ಒಂದು ದೊಣ್ಣೆಯನ್ನು ತೆಗೆದುಕೊಂಡು ಚಾಸಾ-1 ರವರ ಎಡಗೈಗೆ ಹೊಡೆದು ರಕ್ತಗಾಯ ಮಾಡಿದನು ಎಂದರೆ ಸರಿ. ಜಗಳ ಬಿಡಿಸಲು ಹೋದ ನನಗೆ 1 ನೇ ಆರೋಪಿ ಕಾಲಿನಿಂದ ಒದ್ದ ಎಂದರೆ ಸರಿ. ಅಲ್ಲಿಯೇ ಇದ್ದ ಚಾಸಾ-5 ರವರು ಜಗಳ ಬಿಡಿಸಿದರು ಎಂದರೆ ಸರಿ. ನಂತರ ಆರೋಪಿತರು ದೂರು ದಾಖಲಿಸಿದರೆ ಸಾಯಿಸುವುದಾಗಿ ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು ದೊಣ್ಣೆಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್.ಎಂ. ವಕೀಲರಿಂದ**

ನಾನು ವ್ಯವಸಾಯ ಮಾಡುತ್ತೇನೆ. ನಾನು ಓದಿರುವುದಿಲ್ಲ. ಆರೋಪಿತರು ನನ್ನ ಸಂಬಂಧಿಕರು. ನಮಗೂ ಮತ್ತು ಆರೋಪಿತರಿಗೂ ಈ ಪ್ರಕರಣಕ್ಕೂ ಪೂರ್ವದಲ್ಲಿ ಯಾವುದೇ ವ್ಯಾಜ್ಯ ಇರಲಿಲ್ಲ. ನಮ್ಮ ಮತ್ತು ಆರೋಪಿತರ ನಡುವೆ ಹೆಂಗಸರ ವಿಚಾರಕ್ಕೆ ವೈಮನಸ್ಸು ಇರುತ್ತದೆ. ಆಪಾದಿತ ಘಟನೆಯು ಬೆಳಿಗ್ಗೆ 10-00 ಗಂಟೆಗೆ ಆಗಿರುತ್ತದೆ. ಆ ಸಮಯದಲ್ಲಿ ಯಾರೂ ಇರಲಿಲ್ಲ. ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಹೆಂಡತಿ ಮಾತ್ರ ಇದ್ದೇವೆ. ಆರೋಪಿತರ ಮನೆಯಲ್ಲಿ ಅವರ ತಂದೆ ಇರುತ್ತಾರೆ. ಘಟನೆಯ ದಿನ ಯಾವ ದಿನ ಎಂದು ಗೊತ್ತಿಲ್ಲ. 1 ನೇ ಆರೋಪಿಯು ಗಲಾಟೆ ಆದ ಸಂದರ್ಭದಲ್ಲಿ ಇಟ್ಟಿಗೆ ಗೂಡಿನ ಕೆಲಸಕ್ಕೆ ಹೋಗುತ್ತಿದ್ದ. ಪೋಲೀಸರು ಮಚ್ಚು ಹಾಗೂ ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ಗೊತ್ತಿಲ್ಲ. ಆರೋಪಿತರು ಆಪಾದಿಸಿರುವಂತೆ ಹೊಡೆದರು ಬಡೆದರು ಎಂಬುದನ್ನು ಊರಿನ ಬೇರೆ ಯಾರೂ ನೋಡಿಲ್ಲ. ಘಟನೆಯ ನಂತರ ಬೆಳಿಗ್ಗೆ 11-00 ರಿಂದ 11-30 ಗಂಟೆ ಸಮಯದಲ್ಲಿ ಮರಳೇನಹಳ್ಳಿಯಲ್ಲಿರುವ ಪ್ರಾಥಮಿಕ ಚಿಕಿತ್ಸಾ ಕೇಂದ್ರಕ್ಕೆ ಹೋಗಿ ಆ ನಂತರ ಮರು ದಿನ ದೊಡ್ಡಹೆಜ್ಜಾಜಿ ಆಸ್ಪತ್ರೆಯಲ್ಲಿ ಬೆಳಿಗ್ಗೆ 12-00 ಗಂಟೆಗೆ ಚಿಕಿತ್ಸೆ ಪಡೆದರು. ಆ ನಂತರ ಬೆಂಗಳೂರಿನ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದರು. ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡ ಯಾವುದೇ ದಾಖಲೆ ಇರುವುದಿಲ್ಲ. ನಾನೇ ಚಾಸಾ-1 ರವರನ್ನು ಎಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ದೊಡ್ಡಬಳ್ಳಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ಚಾಸಾ-1 ರವರಿಗೆ ಚಿಕಿತ್ಸೆಯನ್ನು ಕೊಡಿಸಿಲ್ಲ. ನಾನು ಪೋಲೀಸರಿಗೆ ನನಗೆ ಸಣ್ಣ ಪುಟ್ಟ ಮೈ ನೋವು ಆಗಿದ್ದು ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದುಕೊಂಡಿಲ್ಲ ಎಂದು ಹೇಳಿಕೆ ನೀಡಿರುವ ಬಗ್ಗೆ

ನೆನಪಿಲ್ಲ. ಆರೋಪಿತರು ನನಗೆಯಾಗಲೀ ಚಾಸಾ-1 ರವರಿಗೆಯಾಗಲೀ ಹೊಡೆದು ಬಡೆದು ಮಾಡಿರುವುದಿಲ್ಲ, ಅವಾಚ್ಯಶಬ್ಧಗಳಿಂದ ಬೈದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ-1 ಸಾಮಾನ್ಯವಾಗಿ ಎಲ್ಲಾ ಕಡೆಯು ಸಿಗುತ್ತದೆ ಎಂದರೆ ಸರಿಯಲ್ಲ. ಮು.ಮಾ-1 ದೊಣ್ಣೆಯನ್ನು ಚಾಸಾ-1 ರವರು ಪೋಲೀಸರಿಗೆ ಕೊಟ್ಟಿದ್ದರು. ಎಲ್ಲಿಂದ ತಂದಿದ್ದರು ಎಂದು ಗೊತ್ತಿಲ್ಲ. ಮು.ಮಾ-1 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಗಣಕಯಂತ್ರದಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**